# **ನಗರಸಭಾ ಕಾರ್ಯಾಲಯ, ಮಂಡ್ಯ.**

ಸಂಖ್ಯೆ:ನಸಮಂ/ಆ.ಸಭೆ/24/2007–08 ದಿನಾಂಕ: 22–12–2007.

ದಿನಾಂಕ: 22–12–2007 ರಂದು ಬೆಳಿಗ್ಗೆ 11–00 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆ, ಮಂಡ್ಯ ಹಾಗೂ ಆಡಳಿತಾಧಿಕಾರಿಗಳು, ನಗರಸಭೆ, ಮಂಡ್ಯರವರು ನಡೆಸಿದ ಸಭೆ ನಡವಳಿಕೆಗಳು.

| |
|---|
| **ವಿಷಯ:1:–** ಕಮಾಂಡೆಂಟ್, ಗೃಹ ರಕ್ಷಕ ದಳ, ಮಂಡ್ಯರವರು ಪತ್ರ ಸಂಖ್ಯೆ.ಜಿಗೃಮ/ಎಡಿಎ/135/2005–06, ದಿನಾಂಕ: 24–05–2007ರಂತೆ ಈ ಕಛೇರಿಗೆ ಪತ್ರ ಬರೆದು ಮಂಡ್ಯ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಕೇಂದ್ರದ ಕಛೇರಿಯ ಗೃಹ ರಕ್ಷಕರ ಭವನ ಮತ್ತು ನೌಕರರ/ಅಧಿಕಾರಿಗಳ ವಸತಿ ಗೃಹಗಳ ಕಟ್ಟಡದ ಕಟ್ಟಲು ನಿವೇಶನವನ್ನು ಕೋರಿರುವ ಮೇರೆಗೆ ಮಂಡ್ಯ ನಗರದ ಬಂದೀಗೌಡ ಬಡಾವಣೆ ಕಲ್ಲಹಳ್ಳಿ ಸಶಾನ ಹಾಗೂ ಮಳೇ ನೀರಿನ ಚರಂಡಿ ಮತ್ತು ರಸ್ತೆ ಮಧ್ಯ ಇರುವ ಸ್ಥಳದ ಅಳತೆ 50'*200' ಅಡಿಗಳ ಜಾಗವನ್ನು ನೀಡುವ ಬಗ್ಗೆ ಕಛೇರಿಯ ಅಭಿಯಂತರರು ಸ್ಥಳ ಪರಿಶೀಲಿಸಿ, ಸದರಿ ನಿವೇಶನದ ಪಕ್ಕದಲ್ಲಿ ಹೈ ಟೆನ್‌ಷನ್ ವೈರ್ ಹಾದು ಹೋಗುವುದರಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಸೆಸ್ಕಾಂ) ರವರಿಂದ ಅನುಮತಿ ಪಡೆದುಕೊಂಡು ಕಟ್ಟಡ ನಿರ್ಮಿಸುವ ಷರತ್ತಿಗೆ ಒಳಪಡಿಸಿ ಸದರಿ ಜಾಗವನ್ನು ಮಂಜೂರುಮಾಡಬಹುದೆಂದು ವರದಿ ನೀಡಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ಗೃಹ ರಕ್ಷಕ ದಳದವರಿಗೆ ಸದರಿ 50'*200'ಅಡಿಗಳ ನಿವೇಶನವನ್ನು ಮಂಜೂರು ಮಾಡುವ ಕುರಿತು ತೀರ್ಮಾನಕ್ಕೆಗೊಳ್ಳತಕ್ಕ ವಿಚಾರ. |
| **ತೀರ್ಮಾನ:1 :–** ಅನುಮೋದಿಸಿದೆ. |

(ಸಹಿ)
ಆಡಳಿತಾಧಿಕಾರಿಗಳು,
ನಗರಸಭೆ, ಮಂಡ್ಯ.